# ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

**ಸಿ.ಸಿ. ನಂ.124/2026**

| | | |
|---|---|---|
| ಸಾಕ್ಷಿದಾರರ ಹೆಸರು | ಫಾತೀಮಾ ಯಾನೆ ಆಯಿಷಾ | ಸಿ.ಡಬ್ಲ್ಯು–4 |
| ಗಂಡನ ಹೆಸರು | ಬಾಷಾ | ಪಿ .ಡಬ್ಲ್ಯೂ–5 |
| ವಯಸ್ಸು | 35 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಗೃಹಿಣಿ | ದಿನಾಂಕಃ |
| ವಾಸಃ | ಸಾಗರ | 17.06.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ಚಾ.ಸಾ 1 ರಿಂದ 3 ಗೊತ್ತು. ಆರೋಪಿತನು ನನಗೆ ಗೊತ್ತು.

**2.** ದಿನಾಂಕ 17.10.2023 ರಂದು ಬಳಸಗೋಡಿನಲ್ಲಿರುವ ನಮ್ಮ ಸಂಬಂಧಿಕರ ಮನೆಗೆ ನಾನು ಹೋಗಿದ್ದೆ. ರಾತ್ರಿ 10.00 ಗಂಟೆ ಸುಮಾರಿಗೆ ಆರೋಪಿತನ ಮನೆಯಲ್ಲಿ ಗಲಾಟೆ ನಡೆಯುತ್ತಿತ್ತು. ನಾನು ಹೋಗಿ ನೋಡಿದಾಗ ಆರೋಪಿತನು ಚಾ.ಸಾ 1 ರವರಿಗೆ ಕೈ ಹಿಡಿದು ಎಳೆದು ದೂಡಿದನು. ಆ ಸಂದರ್ಭದಲ್ಲಿ ಚಾ.ಸಾ 1 ರವರು ಗರ್ಭಿಣಿಯಾಗಿದ್ದರು. ಆರೋಪಿತನು ದೂಡಿದ ರಭಸಕ್ಕೆ ಚಾ.ಸಾ 1 ರವರು ಮಂಚದ ಮೇಲೆ ಬಿದ್ದು, ಅಲ್ಲಿಂದ ಕೆಳಗೆ ಬಿದ್ದರು. ಚಾ.ಸಾ 2 ರವರಿಗೆ ಆರೋಪಿತನು ಕೋಲಿನಿಂದ ಹೊಡೆದನು. ಚಾ.ಸಾ 1 ರವರನ್ನು ನಾನು ಉಪಚರಿಸುತ್ತಿದ್ದಂತೆ, ಚಾ.ಸಾ 3 ರವರು ಅಲ್ಲಿಗೆ ಬಂದರು. ಚಾ.ಸಾ 3 ರವರಿಗೆ ಏಕೆ ಹೀಗೆ ಜಗಳ ಮಾಡುತ್ತಿದ್ದೀರ ಎಂದು ಕೂಗಿದರು. ಆಗ ಆರೋಪಿತನು ಮನೆಯಿಂದ ಹೊರಗೆ ಹೋದನು. ಏಕೆ ಜಗಳವಾಯಿತು ಎಂದು ಚಾ.ಸಾ 2 ರವರನ್ನು ನಾನು ಕೇಳಿದಾಗ ಮನೆ ಬಿಟ್ಟು ಹೋಗು, ನೀನು ಮನೆಯಲ್ಲಿ ಇರಬಾರದು ಎಂದು ಹೇಳಿ ಚಾ.ಸಾ 2 ರವರಿಗೆ ಆರೋಪಿತನು ಕಿರುಕುಳ ನೀಡಿ ಹೊಡೆದು, ಕಚ್ಚಿ ನೋವುಂಟು ಮಾಡಿದ್ದಾನೆ ಎಂದು ತಿಳಿಸಿದರು. ಚಾ.ಸಾ 1 ರವರಿಗೆ ನೋವು ಕಡಿಮೆಯಾಗಿಲ್ಲ ಎಂದರೆ ಬೆಳಿಗ್ಗೆ ಆಸ್ಪತ್ರೆಗೆ ಹೋಗೋಣಾ ಎಂದು ಹೇಳಿ ನಾನು ಅಲ್ಲಿಂದ ವಾಪಸ್ಸು ಬಂದೆ.

**3.** ಮರು ದಿನ ಬೆಳಿಗ್ಗೆ ಪುನಃ ಆರೋಪಿತನು ಚಾ.ಸಾ 1 ಮತ್ತು 2 ರವರೊಂದಿಗೆ ಜಗಳ ಮಾಡಿದನು. ನಂತರ ಚಾ.ಸಾ 1 ರವರು ಹೊಟ್ಟೆ ನೋವು ಎಂದು ಹೇಳಿದ್ದರಿಂದ ಆಸ್ಪತ್ರೆಗೆ

ಕರೆದುಕೊಂಡು ಬಂದೆ. ಚಾ.ಸಾ 1 ರವರು ಗಾಯಗೊಂಡಿದ್ದರಿಂದ ಅವರನ್ನು ಸಹ ವೈದ್ಯರು ಉಪಚರಿಸಿದರು. ಘಟನೆಯ ಕುರಿತು ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿದ್ದೇನೆ. ಎಂ.ಓ-1 ರ ಕೋಲನ್ನು ನೋಡಿ ಸಾಕ್ಷಿಯು ಗುರುತಿಸಿ, ಸದರಿ ಕೋಲಿನಿಂದಲೇ ಆರೋಪಿತನು ಚಾ.ಸಾ 1 ಮತ್ತು 2 ರವರಿಗೆ ಹಲ್ಲೆ ಮಾಡಿದನು ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ.ಎಂ.ಆರ್.ಎಸ್ ರವರಿಂದಃ-**

**1.** ನನ್ನ ತಂದೆಯ ಹೆಸರು ಮೊಹಮ್ಮದ್ ಗೌಸ್. ಚಾ.ಸಾ 2 ಮತ್ತು ಆರೋಪಿತನು ನನ್ನ ಸಹೋದರರು. ಬಳಸಗೋಡಿನಲ್ಲಿರುವ ಮನೆ ನನ್ನ ತಂದೆಯದ್ದು. ಆ ಮನೆಯಲ್ಲಿ ಆರೋಪಿತನು ಮತ್ತು ಅವರ ತಾಯಿ ವಾಸವಾಗಿದ್ದಾರೆ. ನಾನು ಜನ್ನತ್ ನಗರದಲ್ಲಿ ವಾಸವಾಗಿದ್ದೇನೆ. ನನ್ನ ಹೆಸರು ಫಾತೀಮಾ ಆಗಿದ್ದು, ಗಂಡನ ಮನೆಯಲ್ಲಿ ನನ್ನನ್ನು ಆಯಿಷಾ ಎಂದು ಕರೆಯುತ್ತಾರೆ. ಅಬ್ದುಲ್ ರಜಾಕ್ ರವರು ಆರೋಪಿತನ ಸಹೋದರ. ಜೆ.ಪಿ ನಗರದ ಮನೆಯನ್ನು ನನ್ನ ತಂದೆ ಆರೋಪಿತನಿಗೆ ದಾನ ಪತ್ರದ ಮೂಲಕ ವರ್ಗಾವಣೆ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಮನೆಯ ಸಂಬಂಧ ದಾನ ಪತ್ರ ರದ್ದತಿ ಕೋರಿ ನನ್ನ ಸಹೋದರ ಅಬ್ದುಲ್ ರಜಾಕ್ ಇವನು ಆರೋಪಿ ಮತ್ತು ಅವನ ಸಹೋದರ ಸಹೋದರಿಯರ ವಿರುದ್ಧ ದಾವೆ ಸಲ್ಲಿಸಿದ್ದಾನೆ ಎಂದರೆ ಸರಿ. ಆ ಆಸ್ತಿಯನ್ನು ಮಾರಾಟ ಮಾಡಿ ಆರೋಪಿ ಹಾಗೂ ಚಾ.ಸಾ 2 ರವರು ಕೆ.ಹೆಚ್ ಕೆ ಬಡಾವಣೆಯಲ್ಲಿ ಒಂದು ನಿವೇಶನವನ್ನು ಖರೀದಿ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಆಸ್ತಿ ವಿಚಾರವಾಗಿ ಆರೋಪಿತನು ಮತ್ತು ಚಾ.ಸಾ 2 ರವರು ಗಲಾಟೆ ಮಾಡಿಕೊಂಡು ಪಂಚಾಯತಿ ಮಾಡಿದಾಗ ನಾನು ಸಹ ಹಿಸ್ಸೆ ಕೇಳಿ ಹೋಗಿದ್ದೆ ಎಂದರೆ ಸರಿ. ಆ ಕಾರಣ ಆಸ್ತಿ ಪಡೆದುಕೊಳ್ಳುವ ಸಲುವಾಗಿ ಚಾ.ಸಾ 1 ಮತ್ತು 2 ರವರ ಮೂಲಕ ಈ ಕೇಸನ್ನು ನಾನು ಆರೋಪಿತನ ವಿರುದ್ಧ ದಾಖಲು ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ಎಲ್ಲರಿಗೂ ಆಸ್ತಿಯಲ್ಲಿ ಪಾಲು ಕೊಟ್ಟಿದ್ದು, ನನಗೆ ಮತುತ ಚಾ.ಸಾ 2 ರವರಿಗೆ ಕೊಡುವುದಿಲ್ಲ ಎಂದು ಹೇಳಿದ್ದರಿಂದ ಸುಮಾರು 3 ವರ್ಷಗಳಿಂದ ನಮ್ಮ ನಡುವೆ ಮನಸ್ತಾಪ ಇತ್ತು ಎನ್ನುವುದು ಸರಿಯಲ್ಲ. ಆ ಕಾರಣದಿಂದ ಚಾ.ಸಾ 1 ಮತ್ತು 2 ರವರಿಗೆ ನಾನೇ ಚಿತಾವಣೆ ಮಾಡಿ ಈ ಪ್ರಕರಣವನ್ನು ದಾಖಲು ಮಾಡಿಸಿದ್ದೇನೆ ಎಂದರೆ ಸರಿಯಲ್ಲ.

**2.** ಬಳಸಗೋಡಿಗೆ ನಾನು ಮತ್ತು ನನ್ನ ಮಕ್ಕಳು ಹೋಗಿದ್ದೆವು. ನಾವು ಹೋದಾಗ ಬೆಳಿಗೆಗ 11.00 ಗಂಟೆಯಾಗಿತ್ತು. ಬಳಸಗೋಡಿನಲ್ಲಿದ್ದ ನಮ್ಮ ಸಂಬಂಧಿಕರಾದ ಶೀಲಾರವರ ಮನೆಗೆ ಕಾರ್ಯಕ್ರಮಕ್ಕೆ ಹೋಗಿದ್ದೆವು. ಆರೋಪಿತನ ಮನೆಯ ಅಕ್ಕ ಪಕ್ಕದಲ್ಲಿ ಮನೆಗಳು ಇವೆ. ಆರೋಪಿತನ ಮನೆಯ ಪಕ್ಕದಲ್ಲಿ ನನ್ನ ವಾಸದ ಮನೆ ಇಲ್ಲ. ಬಳಸಗೋಡಿನಲ್ಲಿ ಬೇರೆ ಯಾರು ನಮ್ಮ ಸಂಬಂಧಿಕರು ಇಲ್ಲ.

ಶೀಲಾರವರ ಮನೆಯಿಂದ  ಆರೋಪಿತನ ಮನೆಗೆ ಸುಮಾರು 800 ಮೀ. ಇದೆ ಎಂದರೆ ಸರಿಯಲ್ಲ. ಅವರ ಮನೆ ಹತ್ತಿರದಲ್ಲೆ ಇದ್ದು, ಆರೋಪಿತನ ಮನೆಯಿಂದ ಕೂಗಿದರೆ ಶೀಲಾರವರ ಮನೆಗೆ ಕೇಳುತ್ತದೆ. ಸಂಜೆ 04.00 ಗಂಟೆ ಸುಮಾರಿಗೆ ಶೀಲಾರವರ ಮನೆಯಲ್ಲಿ ಕಾರ್ಯಕ್ರಮ ಮುಗಿದಿದ್ದು, ನನ್ನ ಗಂಡ ರಾತ್ರಿ 10.00 ಗಂಟೆಗೆ ಬರುವುದಾಗಿ ಹೇಳಿದ್ದರಿಂದ ನಾನು ಅಲ್ಲಿಯೇ ಇದ್ದೆ. ರಾತ್ರಿ 10.30 ಗಂಟೆಗೆ ನನ್ನ ಗಂಡ ಶೀಲಾರವರ ಮನೆಗೆ ಬಂದರು. ಅವರನ್ನು ನಾನು ಪುನಃ ವಾಪಸ್ಸು ಕಳುಹಿಸಿದೆ. ಆರೋಪಿತನ ಮನೆಗೆ ಹೋಗೋಣಾ ಎಂದು ನನ್ನ ಗಂಡ ನನ್ನನ್ನು ಕರೆದಿಲ್ಲ. ನನ್ನ ಗಂಡ ಹೋದ ಸುಮಾರು 5 ನಿಮಿಷದ ನಂತರ ನಾನು ಆರೋಪಿತನ ಮನೆಯಲ್ಲಿ ಗಲಾಟೆ ಶಬ್ಧ ಕೇಳಿ ಹೋದೆ.

**3.** ನಾನು ಆರೋಪಿತನ ಮನೆಗೆ ಹೋದಾಗ ಚಾ.ಸಾ 3 ರವರು ರೂಂನಲ್ಲಿ ಇದ್ದರು. ಚಾ.ಸಾ 1, 2 ಮತ್ತು ಆರೋಪಿತನು ಹಾಲ್ ನಲ್ಲಿ ಇದ್ದರು. ಪೋಲಿಸರು ನನ್ನನ್ನು ಠಾಣೆಗೆ ಕರೆಯಿಸಿರಲಿಲ್ಲ. ಗಲಾಟೆ ವಿಷಯವನ್ನು ನಾನು ಪೋಲಿಸರಿಗೆ ಫೋನ್ ನಲ್ಲಿ ಹೇಳಿದ್ದೇನೆ. ನಾನು, ನನ್ನ ತಾಯಿಯೊಂದಿಗೆ ಗಲಾಟೆಯನ್ನು ಬಿಡಿಸಿಲ್ಲ. ಆರೋಪಿತನ ಮನೆಯಲ್ಲಿ ಮೊದಲು ಹಾಲ್, ನಂತರ ಎರಡು ಬೆಡ್ ರೂಂ, ನಂತರ ದೇವರಕೋಣೆ ನಂತರ ಅಡುಗೆ ಕೋಣೆ ಇದೆ. ರಾತ್ರಿ 11.00 ಗಂಟೆಯವರೆಗೆ ದಿನಾಂಕ 17.10.2023 ರಂದು ಗಲಾಟೆ ನಡೆಯಿತು. ಆರೋಪಿತನು ನೀನೇಕೆ ಇಲ್ಲಿಗೆ ಬಂದೆ ಎಂದು ನನಗೆ ಗಲಾಟೆ ಕಾಲಕ್ಕೆ ಬೈಯ್ದನು. ಘಟನೆಯ ದಿನದಂದು ರಾತ್ರಿ 10.30 ಗಂಟೆಗೆ ಚಾ.ಸಾ 1 ಮತ್ತು 3 ರವರು ರೂಂನಲ್ಲಿ ಮಲಗಿದ್ದರು ಎಂದರೆ ಸರಿಯಲ್ಲ. 11.00 ಗಂಟೆಗೆ ನಾನು ಗಲಾಟೆಯನ್ನು ಬಿಡಿಸಿದೆ. ಘಟನಾ ಸ್ಥಳದ ಚಕ್ಕು ಬಂದಿ ಹೇಳಲು ಆಗುವುದಿಲ್ಲ. ದಿನಾಂಕ 17.10.2023 ರಂದು ಯಾವುದೇ ಗಲಾಟೆ ನಡೆದಿಲ್ಲ ಮತ್ತು ನಾನು ಗಲಾಟೆ ಬಿಡಿಸಿಲ್ಲ ಎನ್ನುವುದು ಸರಿಯಲ್ಲ. ಆರೋಪಿತನು ಚಾ.ಸಾ 1 ಮತ್ತು 2 ರವರಿಗೆ ಹಲ್ಲೆ ಮಾಡಿಲ್ಲ ಎನ್ನುವುದು ಸರಿಯಲ್ಲ. ಚಾ.ಸಾ 1 ಮತ್ತು 2 ರವರು ಅಕ್ರಮವಾಗಿ ಆಸ್ತಿ ಪಡೆಯಲು ಈ ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ.

**4.** ಎಂ.ಒ–1 ರ ಕೋಲಿನಿಂದ ಆರೋಪಿತನು ಚಾ.ಸಾ 2 ರವರಿಗೆ ಎರಡು ಬಾರಿ ಕಾಲಿಗೆ ರಾತ್ರಿ 11.00 ಗಂಟೆ ಸುಮಾರಿಗೆ ಹೊಡೆದನು. ಎಂ.ಒ–1 ರ ಕೋಲನ್ನು ಆರೋಪಿತನು ಹೋಂ ಗಾರ್ಡ್ ಕೆಲಸಕ್ಕೆ ಮನೆಯಲ್ಲಿ ಇಟ್ಟುಕೊಂಡಿದ್ದು, ಅದನ್ನು ನಾನು ಪೋಲಿಸರಿಗೆ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಎಂ.ಒ–1 ರ ಮೇಲೆ ನಾನು ಯಾವುದೇ ವಿಶೇಷ ಗುರುತನ್ನು ಇಟ್ಟುಕೊಂಡಿಲ್ಲ. ಎಂ.ಒ–1 ರಿಂದ ಆರೋಪಿತನು ರಾತ್ರಿ 11.00 ಗಂಟೆಗೆ ಚಾ.ಸಾ 2 ರವರ ಕಾಲಿಗೆ ಹೊಡೆದಿಲ್ಲ ಎಂದರೆ

ಸರಿಯಲ್ಲ. ದಿನಾಂಕ 17.10.2023 ರಂದು ಗಲಾಟೆ ಕುರಿತು ನಾನು ಪೋಲಿಸರಿಗೆ ಮಾಹಿತಿ ನೀಡಿಲ್ಲ. ದಿನಾಂಕ 18.10.2023 ರಂದು ಬೆಳಿಗ್ಗೆ 10.00 ಗಂಟೆ ಸುಮಾರಿಗೆ ಚಾ.ಸಾ 1 ಮತ್ತು 2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ಈ ವಿಷಯವನ್ನು ನಾನು ಪೋಲಿಸರಿಗೆ ಹೇಳಿಲ್ಲ. ದಿನಾಂಕ 18.10.2023 ರಂದು ಆರೋಪಿತನು ಚಾ.ಸಾ 1 ಮತ್ತು 2 ರವರಿಗೆ ಅವಾಚ್ಯವಾಗಿ ಬೈಯ್ಯುತ್ತಿದ್ದನು. ಆಗ ಚಾ.ಸಾ 3 ರವರು ಆರೋಪಿತನಿಗೆ ಏನೂ ಹೇಳಿಲ್ಲ. ದಿನಾಂಕ 18.10.2023 ರಂದು ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ಈ ಘಟನೆ ಮತ್ತು ಆರೋಪಿತನಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾ.ಸಾ 1 ರವರ ಕೈ ಹಿಡಿದು ಆರೋಪಿತನು ಎಳೆದಿಲ್ಲ ಎಂದರೆ ಸರಿಯಲ್ಲ. ದಿನಾಂಕ 17.10.2023 ರಂದು ಚಾ.ಸಾ 1 ರವರು ಗರ್ಭಿಣಿಯಾಗಿರಲಿಲ್ಲ ಎಂದರೆ ಸರಿಯಲ್ಲ. ಚಾ.ಸಾ 2 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.